ಬಿಡುನೆಂದರೂ ಮಾಯೆ ಬಿಟ್ಟು ಹೋಗದೇ ಹೋಗಿತ್ತು.

ಗುಳೆ ಹೋದವರೆಲ್ಲಾ ಊರಿಗೆ ಬಂದರೂ ತಾಳಿ ಕಟ್ಟಿಸಿಕೊಂಡವಳು ಬಾರದೇ ಹೋದಾಗ ಅವನ ಹೃದಯ ಕಳಚಿದಂತಾಯಿತು. ಅವಳಿಗಾಗಿ ಕಾದು ಕಾದು ಸಾಕಾಯಿತು. ಅವನ ನಿತ್ಯ ಜೀವನದ ಶಿಸ್ತು ಮಾಸತೊಡಗಿತು. ಯಾವುದರಲ್ಲೂ ಆಸಕ್ತಿ ಉಳಿಯಲಿಲ್ಲ. ಮಳೆಬೆಳೆ ಎಲ್ಲಾ ಚೆನ್ನಾಗಿ ಊರ ಜನರೆಲ್ಲಾ ನೆಮ್ಮದಿಯಾದರು. ಉತ್ಸಾಹದಲ್ಲಿ ಹಬ್ಬಗಳನ್ನು ಆಚರಿಸಿದರು. ಜಾತ್ರೆ ಮಾಡಿದರು. ಇವನನ್ನೂ ಸಹಾನುಭೂತಿಯಿಂದ ವಿಚಾರಿಸಿಕೊಂಡು ಹೋಗುತ್ತಿದ್ದರು. ಎಲ್ಲ ನಾಟಕೀಯವಾಗಿ ಅವನಿಗೆ ತೋರುತ್ತಿತ್ತು. ಗಂಗೆ ಹೀಗೆ ಮಾಡುವಳೆಂದು ಅವನು ಅಂದುಕೊಂಡಿರಲಿಲ್ಲ.

ಶಿವಣ್ಣ, ಗಂಗೆ ಇಂದು ಬರುತ್ತಾಳೆ ನಾಳೆ ಬರಬಹುದು ಎಂದು ನಿರೀಕ್ಷೆ ಮಾಡುತ್ತ ಕಾದೇ ಕಾದ. ಅವಳ ಸುಳಿವೇ ಇರಲಿಲ್ಲ.

ಸೂರ್ಯೋದಯವಾದಾಗ ಎದ್ದು, ಹೊಲದ ಕಡೆ ಓಡಿ ಬಿಡುತ್ತಿದ್ದ ಶಿವಣ್ಣ ಈಗ ಸೂರ್ಯನ ಬೆಳಕು ಕೋಣೆ ತುಂಬಿದರೂ ಹಾಸಿಗೆ ಮೇಲೇ ಬಿದ್ದು ಕೊಂಡಿರುತ್ತಿದ್ದ. ತಾನು, ಹೊಲಕ್ಕೆ ಹೋಗಿ ನೆಲದ ಆರೈಕೆ ಮಾಡುವ ಬದಲಾಗಿ ಅದಕ್ಕೆ ಆಳನ್ನು ನೇಮಿಸಿದ. ಆಳು ಮಾಡಿದ್ದಷ್ಟೇ ಕೆಲಸ. ಆಳು ಏನು ಮಾಡಿದ, ಎತ್ತ ಹೋದ ಏನನ್ನೂ ವಿಚಾರಿಸುತ್ತಿರಲಿಲ್ಲ. ಸದಾ ಕಾಲ ಹೊದಲ ಕೆಲಸ, ಕೊಟ್ಟಿಗೆ ಕೆಲಸ, ಉಳುಮೆ ಸಲಕರಣೆಗಳನ್ನು ಮತ್ತು ಮನೆಯ ಬಳಕೆ ವಸ್ತುಗಳನ್ನು ಶುಭ್ರಗೊಳಿಸುವುದು ಅವನ ಹಿಂದಿನ ಮೆಚ್ಚಿನ ಕೆಲಸವಾಗಿತ್ತು. ಈಗ ಅದನ್ನೂ ಬಿಟ್ಟಿದ್ದ. ಮನೆ ಧೂಳಿನ ಗೂಡಾಗಿತ್ತು.

ಒಲೆ ಹಚ್ಚಿದ ಹೊಗೆ ವಾಸನೆಯೂ ಬಾರದಿದ್ದಾಗ ನೆರೆಹೊರೆಯವರೇ ಏನಾದರೂ ಪಲ್ಯ, ಸಾರು ತಂದಿಟ್ಟು ಹೋಗುತ್ತಿದ್ದರು. ರೊಟ್ಟಿ ಮಾಡಿದ್ದು ಹಳಸಿ ಗಟ್ಟಿಯಾಗಿದ್ದರೂ ಕೆಲವೊಮ್ಮೆ ತಿಂದುಕೊಳ್ಳುತ್ತಿದ್ದ; ಇನ್ನು ಕೆಲವೊಮ್ಮೆ ಬಿಸಾಡಿ ಬಿಡುತ್ತಿದ್ದ. ಈಗ ಹಟ್ಟಿ ತುಂಬಲು, ರೊಟ್ಟಿ ಬಡಿದು ತಿನ್ನಿಸಲು ದೂರದ ನೆಂಟು ಹಿಡಿದು ಹೆಗ್ಗಣದಂತೆ ಬಂದು ಇವನ ಮನೆ ಸೇರಲಾರಂಭಿಸಿತ್ತು. ದೂರದ ಚಿಕ್ಕಮ್ಮ ಒಬ್ಬಳು ಆರು ವರ್ಷದ ಮೊಮ್ಮಗಳೊಂದಿಗೆ ಬಂದವಳು ಹಿಂದಿರುಗಿ ಹೊರಡದೆ ಇಲ್ಲೇ ಝಾಂಡಾ ಊರಿ ಬಿಟ್ಟಳು. ಅವನು ಅವಳ ಬಗ್ಗೆ ತಲೆ ಕೆಡಿಸಿಕೊಳ್ಳಲೂ ಇಲ್ಲ. ಆ ಮುದುಕಿ ಅವನ ಹೊಟ್ಟೆ ತುಂಬುವಂತೆ ರುಚಿಯಾದ ಅಡುಗೆ ಮಾಡಿ ತಿನ್ನಿಸುತ್ತಿದ್ದಳು. ಅದೂ ಅವನ ನಿರ್ಲಿಪ್ತತೆ ಬದಲಿಸಲಿಲ್ಲ.

ಒಂದು ದಿನ ಆ ಹೆಂಗಸು ತನ್ನ ಮೊಮ್ಮಗಳ ತಲೆಗೆ ಹತ್ತಿದ ಸೀರನ್ನು ಬಾಚಿ ಬಾಚಿ ತೆಗೆಯುತ್ತಿದ್ದಳು. ಶಿವಣ್ಣ ಹಾಸಿಗೆ ಮೇಲೇ ಬಿದ್ದುಕೊಂಡಿದ್ದ.

'ಶಿವಣ್ಣಾ' ಎಂದಳಾಕೆ.

ಅವನು ಸುಮ್ಮನೆ ಮಲಗಿಯೇ ಇದ್ದ.

'ಶಿವಾ... ಯಾಟು ಜಿನ ಅಂತ ಹಿಂಗಾ ಕಾಲಾ ತೆಗೀತೀಯಪಾ.... ಆ ಹಡಬೆ ಹೆಂಗ್ಸು ಗಂಗಿ ಬರೂದಿಲ್ಲ ಕಂಡ್ಯಾ?.... ನನ್ನ ಮಾತು ಕೇಳಕ್ಕೆ ಹಿಂಗೆ ಚಿಂತಿ ಮಾಡ್ತಾ ಕೂತು, ಮನಿ ಹೊಲಾ ಎಲ್ಲಾ ಹಾಳು ಮಾಡಬ್ಯಾಡಾ .... ಹಿರೀಕರ ಸೊತ್ತು ಇದು. ಇದ್ನ ಒಪ್ಪವಾಗಿಟ್ಟುಕೊಳ್ಳೋದು ನಿನ್ನ ಧರ್ಮ...'

'ಯಾರ್ಗಾಗಿ ಒಪ್ಪ ಮಾಡ್ಲಿ ಚಿಗಪ್ಪಾ?...'

'ನಿಂಗಾಗಿ .... ನಿನ್ನ ವಂಸ ಬೆಳ್ಯಾಕ...'

'ಅವನು ವ್ಯಂಗ್ಯವಾಗಿ ನಕ್ಕು....' ಹೆಂಡ್ತೀನೆ ಇಲ್ಲ. ಇನ್ನು ವಂಶದ ಮಾತ್ಯಾಕೆ?...'

'ಅದ್ಕೇ ಹೇಳ್ಲಿಕ್ಕ ಹತ್ತೇನು ನೋಡಾ.... ನೀ ಎಡುಕಿ ಮಾಡ್ಕಾ.... ನೀನು ಒಪ್ಪಿದ್ರ... ನನ್ನ ಮಗ್ಳೇ ಆಳೆ.... ಈ ಪೇರಿಯ ತಾಯಿ ಆಕೀಗೆ ಇನ್ನೊಂದು ಗಂಡು ಕೈಕೂಸು ಅದ .... ಈಗ ಗಂಡ್‌ಸತ್ ಮುಂಡೆ ಆಗ್ಯಾಳ.... ಆಕೀನ ಉಡ್ಕಿ ಮಾಡ್ಕೊ... ನಿಂದಾ ಕೂಸು ಆದ್ರ ಸೈ.... ಇಲ್ದೀರ ಆಡಿ ಮಗಾ ಅವಾನಲ್ಲಾ ಅದನ್ನ ದತ್ತಕ ಮಾಡ್ಕಾ....'

ನಕ್ಷೆಯನ್ನೆಲ್ಲಾ ಬಿಚ್ಚಿ ಹರಡಿದ. ಆ ಮುದುಕಿ ಅದನ್ನು ಕಾರ್ಯರೂಪಕ್ಕೆ ಇಳಿಸಲು ಇಲ್ಲೇ ಭದ್ರವಾಗಿ ಕೂತೇ ಬಿಟ್ಟಳು. ಇದರಿಂದ ಅವರಿಗೆ ತನ್ನ ಮನೆಯಲ್ಲಿ ತಾನೇ ನೆಮ್ಮದಿಯಾಗಿ ಬಿದ್ದಿರಲ್ಲ. ಅಸಾಧ್ಯವಾಯಿತು. ಏನು ಮಾಡಬೇಕೋ ತೋಚಲಿಲ್ಲ. ಎಲ್ಲ ಜಂಜಾಟಗಳಿಂದ ಪಾರಾಗಿ ಎಲ್ಲಾದರೂ ಹೋಗಿ ಬಿಡಬೇಕು ಎನ್ನಿಸಿತು.

ಗಂಗಾ ಮೈಸೂರಲ್ಲೇ ಉಳಿದು ಕೊಂಡಿದ್ದಾಳೆಂಬುದು ಅವಳ ಜೊತೆ ಹೋಗಿ ಬಂದವರಿಂದ ತಿಳಿದು ಬಂದಿತ್ತು. ಅಲ್ಲೇ ಇದ್ದರೆ ಹೇಗಾದರೂ ಪತ್ತೆ ಮಾಡಿ ಕರೆ ತರಬಹುದು ಎನ್ನಿಸಿತು. ಮೈಸೂರು ಪಟ್ಟಣ ಹಿಂದೆ ಒಂದೆರಡು ಸಲ ನೋಡಿಯೂ ಇದ್ದ. ಅವನ ಬಳಗದವರೊಬ್ಬರು ಅಲ್ಲಿ ಗ್ರಂಥಿಗೆ ಅಂಗಡಿ ಇಟ್ಟಿದ್ದರು. ದೇಶ ಊರು ಸುತ್ತಿ ಬರಲೂ ಹೋದಾಗ ಅವರಲ್ಲಿ ತಂಗಿದ್ದ. ಮತ್ತೊಮ್ಮೆ ದಸರಾ ಹಬ್ಬಕ್ಕೂ ಹೋಗಿ ಬಂದಿದ್ದ. ಗಂಗೆ ಕೂಲಿ ಕೆಲಸ ಮಾಡಿದ ದೇವಸ್ಥಾನ ಹೆಸರು ವಾಸಿಯಾಗಿದ್ದು, ಅಲ್ಲಿ ತಲುಪುವುದೂ ಸುಲಭವಾಗಿತ್ತು. ಅವಳಲ್ಲೇ ಇನ್ನೂ ಇದ್ದರೆ ಯೋಚನೆ ಇರಲಿಲ್ಲ. ಆದರೆ ಅಲ್ಲಿರುವ ನಂಬಿಕೆ ಅವನಿಗಿರಲಿಲ್ಲ. ಅಲ್ಲಿ ಕೆಲಸ ಮುಗಿದ ಮೇಲೆ ಮತ್ತೆಲ್ಲಾದರೂ ಓಡಿ ಹೋಗಿರಬಹುದು. ಯಾರ ಹಿಂದೆ ಹೋಗಿರುವಳೋ ಯಾರಿಗೆ ಗೊತ್ತಿದೆ?!

ಆದರೂ ಒಂದು ಕೈ ನೋಡಿ ಬಿಡುವ ಬಯಕೆ ಬಲಯುತವಾಯಿತು. ಅವಳಿರದೆ ತಾನು ಇರಲಾರೆ. ಅವಳು ಬೇಕೇ ಬೇಕು. ಅವಳನ್ನು ಕಂಡು ಹಿಡಿದು ಕರೆದು ತಂದು ಸಂಸಾರ ಮಾಡಲೇಬೇಕು ಎಂದು ಸಂಕಲ್ಪಿಸಿದ.

ಹೊಲ ನೆಲದ ಜವಾಬ್ದಾರಿ ಸೋದರ ಮಾವ ಯಲ್ಲಪ್ಪನಿಗೆ ಒಪ್ಪಿಸಿದ. ಮನೆ ಖಾಲಿ ಬೀಳದಿರಲಿ ಈ ಮುದುಕಿ ಹೇಗೂ ಇದಾಳೆ, ಇರಲಿ!... ತಾನು ಗಂಗೆ ಹಿಂದಿರುಗಿ ಬರುವ ತನಕ ಚಿಂತೆ ಇರುವುದಿಲ್ಲ.... ಗಂಗೆಯೊಂದಿಗೆ ಹಸನಾದ ಬಾಳ್ವೆ ಪ್ರಾರಂಭಿಸುತ್ತೇನೆಂಬ ಉಮೇದಿನಲ್ಲಿ ಶಿವಣ್ಣ ಹುಬ್ಬಳ್ಳಿಗೆ ಹೋಗಿ, ಅಲ್ಲಿ ಮೈಸೂರ ಗಾಡಿ ಏರಿದ.

ಮೈಸೂರು ತಲುಪಿ, ಒಂದು ದಿನ ಸುಧಾರಿಸಿಕೊಂಡು, ಆ ದೇವಸ್ಥಾನದ ಕಡೆ ಗಂಗೆಯನ್ನು ಹುಡುಕಿಕೊಳ್ಳಲು ಹೊರಟುಬಿಟ್ಟ.

ಅಲ್ಲಿ ಗಂಗೆಯನ್ನೇ ಕಂಡ! ಆದರೆ ಒಂದು ಎಳೆ ಶಿಶುವನ್ನು ಎತ್ತಿಕೊಂಡಿದ್ದಾಳೆ. ಮೈ ಉರಿದು ಹೋಯಿತು. ಸಿಟ್ಟನ್ನು ಹೇಗೆ ತಡೆದುಕೊಂಡನೊ ಅದನ್ನವನೇ ಬಲ್ಲ!

ತಕ್ಷಣ ಹೋಗಿ ಅವಳನ್ನು ಹಿಡಿದು ಅಲ್ಲಾಡಿಸಿ ಬಿಡಲಿಲ್ಲ. ಕೂಸನ್ನು ಹಿಸುಕಲಿಲ್ಲ. ತಾಳ್ಮೆ ಕಳೆದುಕೊಂಡ. ಅವಳಿಗಾಗಿ ಅಲೆಯ ಬೇಕಿಲ್ಲ. ಕಾಲಿಗೇ ತೊಡೆದುಕೊಂಡು ಇಲ್ಲೇ ಇದಾಳಲ್ಲ! ಅವಳು ತನ್ನನ್ನು ಕಂಡೂ ಕಾಣದಾಗಿದ್ದಳು. ಅಲ್ಲಿಂದ ಮರೆ ಮಾಚಿಕೊಂಡು ಬಸ್ಸನ್ನು ಹಿಡಿದು ಗ್ರಂಥಿಗೆ ಅಂಗಡಿ ನೆಂಟನ ಮನೆಗೆ ಹೋದ. ಇಡೀ ದಿನ, ರಾತ್ರಿ ನಕ್ಷೆಯೊಂದನ್ನು ರೂಪಿಸ ತೊಡಗಿದ. ಏನೋ ಒಂದು ನಿರ್ಧಾರಕ್ಕೆ ಬಂದು ನಿಂತ. ಆ ದಿನ ಶಿವಪ್ಪನ ಜೊತೆ ಅಸ್ವಸ್ಥಳಾಗಿದ್ದ ಗಂಗೆಯನ್ನು ನೋಡಲು ಹೋದಾಗ ಗಂಗೆ ತನ್ನನ್ನು ಕಂಡ ತಬ್ಬಿಬ್ಬಾಗುವಳೆಂದು ಊಹಿಸಿದ್ದ. ಆದರೆ ಅವಳು ಯಾವ ದಿಗ್ಭ್ರಮೆಯನ್ನೂ ವ್ಯಕ್ತಪಡಿಸಲಿಲ್ಲ. ನಾಡಿ ಓಟ ತಿಳಿಯಲು ಕೈಹಿಡಿದಾಗ, ಕಣ್ಣಿನ ರೆಪ್ಪೆ ಬಿಡಿಸಿ ಕಣ್ಣಲ್ಲಿ ಇಟ್ಟು ನೋಡಿದಾಗ ಅವಳು ಬಿಡಿಸಿಕೊಳ್ಳುವ ಪ್ರಯತ್ನ ಸಹಾ ಮಾಡಲಿಲ್ಲ.

ಅವನಿಗೆ ಅರಿವಾಗದಂತೆ ಅವಳ ಎದೆಯನ್ನು ಸೂಜಿ ಮೊನೆಗಳು ಚುಚ್ಚುತ್ತಿದ್ದವು. ಇವನಿಗೆ ಮೋಸ ಮಾಡಿ ಜೀವನವನ್ನು ಕೆಡಿಸಿದ್ದೇನೆ! ನಾನು ಸಾವಿತ್ರಿಯಾಗಲಿಲ್ಲ. ಸೂಳೆಯಂತಾಗಿದ್ದೇನಿ!... ಸೀತೆಯಂತೆ ಗಂಡನಿಗೆ ಕೊರಗಿ ಕೂರಲಿಲ್ಲ. ದಮಯಂತಿಯಂತೆ ಕಷ್ಟಕಾಲದಲ್ಲಿ ಗಂಡನೊಡನೆ ಉಳಿದು ಕೊಳ್ಳಲಿಲ್ಲ. ಅಹಲ್ಯೆಯಂತೆ ತನಗೆ ಶಾಪ ತಟ್ಟಲಿಲ್ಲ. ದ್ರೌಪದಿಯಂತೆ ಅನುಸರಿಸಲಿಲ್ಲ. ಪತಿವ್ರತೆಯರ ಎಲ್ಲ ಒಳ್ಳೆಗುಣಗಳ ಕಥೆಗಳನ್ನು ಹಿರಿಯರಿಂದ ಚಿಕ್ಕಂದಿನಲ್ಲಿ ಕೇಳಿಯೂ ತಾನು ಪತಿಯಾದೆ! ಗಂಡನದಲ್ಲದ ಕೂಸು ಹಡೆದು ಬಿಟ್ಟೆ!...


ಈತ! ಕೂಸಿಗೆ ಹೋದ ಪ್ರಾಣ ಹಿಂದಿರುಗಿಸಿ, ತನ್ನ 'ಒಳ್ಳೆತನ' ತೋರಿಸಿದ್ದಾನೆ!...

ಶಿವಣ್ಣ ಒಂದು ಸಣ್ಣ ಕುಪ್ಪಿಯಲ್ಲಿ ನೀರು ತೆಗೆದುಕೊಂಡು ಅದರಲ್ಲೊಂದು ಗುಳಿಗೆ ತೇದಿ ಗಂಗೆಗೆ ಕುಡಿಸಿದ. 'ಮಾತ್ರೆ ಅರೆಯಲು ಜೇನುತುಪ್ಪ ಇದ್ದರೆ ಒಳಿತಿತ್ತು. ನಿಮ್ಮ ಶೀನಪ್ಪನನನ್ನು ಕಳ್ಸಿದೆ. ಅಂವ ಬರ್ಲಿಲ್ಲ.... ಬಿಡು, ಇದನ್ನೇ

**ನಾಳೆ**

'ನಾಳೆ' ಎಂಬುದು
ತನ್ನ ತಪ್ಪುಗಳನ್ನು
ತಿದ್ದಿಕೊಳ್ಳಲು
ಕಾಲ ನೀಡುವ
ಒಂದು ಅವಕಾಶ!

★ ಎಸ್. ಓಂಕಾರಯ್ಯ ತವನಿಧಿ



ವಿಜಯ